ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ.

ಈ) ಸಾರ್ವಜನಿಕರಿಗೆ ಯಾವ ತೊಂದರೆಯಾಗದಂತೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಹರಪನಹಳ್ಳಿ ತಾಲ್ಲೂಕಿನಲ್ಲಿ ಎನ್. ಆರ್. ಡಬ್ಲ್ಯೂ. ಎಸ್, ಯೋಜನೆ.

೨೦೬೬. ಶ್ರೀ ಬಿ. ಎಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ೧೯೮೫-೮೬ ರಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ಎನ್ ಆರ್ ಡಬ್ಲ್ಯೂ ಎಸ್ ಅಡಿಯಲ್ಲಿ ಮಂಜೂರಾದ ಹಳ್ಳಿಗಳು ಯಾವುವು ?

೨ ಮಿನಿವಾಟರ್ ಸರಬರಾಜು ಯೋಜನೆ ಮೇರೆಗೆ ಮಂಜೂರಾದ ಗ್ರಾಮಂಗಳು ಯಾವುವು ?

೩ ಅವುಗಳಲ್ಲಿ ಎಷ್ಟು ಕೆಲಸಗಳು ನಡೆಯುತ್ತಿವೆ ? ಹಾಗೂ ಎಷ್ಟು ಪೂರ್ಣಗೊಂಡಿವೆ ?

ಶ್ರೀ ಅಬ್ದುಲ್ ಸಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

೧ ೧) ಅರಸನಾಳು ೨) ಕದಿಬತ್ತಳ್ಳಿ

೨ ೧೯೮೫-೮೬ನೇ ಸಾಲಿನಲ್ಲಿ ಈ ಕೆಳಕಂಡ ಹನ್ನೊಂದು ಗ್ರಾಮಗಳಿಗೆ ಮಿನಿವಾಟರ್ ಸಪ್ಲೈ ಸ್ಕೀಂಗಳು ವಿವಿದ ಕಾರ್ಯಕ್ರಮಗಳಲ್ಲಿ ಮಂಜೂರಾಗಿವೆ.

ರಾಜ್ಯ ಘಟಕ :

---

೧) ನಿಟ್ಟೂರು, ೨) ಅರಸನಾಳು ೩) ರಾಗಿಮಂಲಸವಾಡ ೪) ಕಾವಲಹಳ್ಳಿ ೫) ಬೆಂಡಿಗೆರೆ ದೊಡಕಾಂಡ ೬) ಅಣಜಿಗೆರೆ.

ಕೇಂದ್ರ ಘಟಕ :

---

೧) ಕಡಬಗೆರೆ ೨) ಬಾಳಿಗನೂರು ೩) ಹಗರಿಗಜಾಪುರ

ಬರಪರಿಹಾರ :

---

೧) ಗೌರಿಹಳ್ಳಿ ೨) ಕೋಲಹಳ್ಳಿ

೩ ೧) ಎರಡು ಎನ್ ಆರ್ ಡಬ್ಲ್ಯೂ ಎಸ್ ಯೋಜನೆಗಳು ಪ್ರಗತಿಯಲ್ಲಿವೆ.

೨) ಎಲ್ಲಾ ಹನ್ನೊಂದು ಮಿನಿವಾಟರ್ ಸಪ್ಲೈ ಸ್ಕೀಂಗಳು ಕೆಲಸ ಪೂರ್ಣಗೊಂಡಿದ್ದು ನೀರನ್ನು ಒದಗಿಸಲಾಗುತ್ತಿದೆ.

ಮಾಗಡಿ ತಾಲ್ಲೂಕಿನಲ್ಲಿ ಕಿರು ನೀರು ಸರಬರಾಜು ಯೋಜನೆ

೧೭೯೮ ಶ್ರೀ ಹೆಚ್.ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

೧. ಮಾಗಡಿ ತಾಲ್ಲೂಕಿನಲ್ಲಿ ಕಿರು ನೀರು ಸರಬರಾಜು ಯೋಜನೆ ಪತಿಯಿಂದ ಎಷ್ಟು ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದೆ?

೨. ಕೊಳವೆ ಮಂಲಕ ನೀರು ಸರಬರಾಜಿಗಾಗಿ ಎಷ್ಟು ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದೆ?

೩. ಅವುಗಳ ಪೈಕಿ ಎಷ್ಟು ಹಳ್ಳಿಗಳಿಗೆ ಪೂರ್ತಿಯಾಗಿ ನೀರು ಸರಬರಾಜು ಮಾಡಲಾಗಿದೆ? ಉಳಿದ ಹಳ್ಳಿಗಳಿಗೆ ಕೊಡದಿರಲು ಕಾರಣವೇನು?

೪. ಹಾಗೂ ಉಳಿದ ಹಳ್ಳಿಗಳಿಗೆ ನೀರು ಪೂರೈಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

೫. ಅ) ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಾಲ್ಲೂಕ್ ಮಟ್ಟದಲ್ಲಿದ್ದಾರೆಯೆ?

ಆ) ಅವರು ಆಯಾ ಸ್ಥಳದಲ್ಲೇ ವಾಸ ಮಾಡಬೇಕೆಂದು ಸರ್ಕಾರಿ ನಿಬಂಧನೆಯೇನಾದರೂ ಇದೆಯೇ?

ಇ) ಹಾಗಿದ್ದಲ್ಲಿ ಈ ರೀತಿ ವಾಸವಾಗಿಲ್ಲದಿರುವವರ ಮೇಲೆ ಏನು ಕ್ರಮತೆಗೆದು ಕೊಳ್ಳಲಾಗಿದೆ?

ಶ್ರೀ ಅಬ್ದುಲ್ ನಜೀರ್‌ಸಾಬ್(ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್‌ನ ಮಂತ್ರಿಗಳು).–

೧) ೧೨

೨) ೧೫

೩. ೧೨ ಕಿರು ನೀರು ಯೋಜನೆಗಳ ಪೈಕಿ ೯ ಪೂರ್ತಿಗೊಂಡಿದೆ. ಇನ್ನು ಮೂರು ಕಿರು ನೀರು ಯೋಜನೆಗಳನ್ನು ೧೯೮೭ನೇ ಮಾರ್ಚ್ ತಿಂಗಳಲ್ಲಿ ಪೂರ್ತಿಗೊಳ್ಳುತ್ತವೆ.

೧೫ ಕೊಳವೆ ಮೂಲಕ ನೀರು ಸರಬರಾಜು ಯೋಜನೆಗಳ ಪೈಕಿ ೫ ಪೂರ್ತಿಗೊಂಡಿವೆ. ೬ ಹಳ್ಳಿಗಳಿಗೆ ನೇರ ನೀರು ಸರಬರಾಜು ಮಾಡಲಾಗುತ್ತಿದೆ. ಇನ್ನು ಉಳಿದ ೪ ಯೋಜನೆಗಳ ಕೆಲಸ ಪ್ರಗತಿಯಲ್ಲಿವೆ.

೪. ೧೯೮೭–೮೮ನೇ ಸಾಲಿನಲ್ಲಿ ಏಳು ಕಿರು ನೀರು ಸರಬರಾಜು ಯೋಜನೆ ಮತ್ತು ಒಂದು ತ್ವರಿತ ಗ್ರಾಮಾಂತರ ನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು. ಉಳಿದ ಹಳ್ಳಿಗಳಿಗೆ ಜನ ಸಂಖ್ಯೆ ಆಧಾರದ ಮೇಲೆ ಹಂತಹಂತವಾಗಿ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

೫. ಅ) ಇದ್ದಾರೆ

ಆ) ಇದೆ

ಇ) ಅಮಾನತ್ತಿನಲ್ಲಿಡುವಂತಹ ಕಠಿಣ ಕ್ರಮಗಳನ್ನು ಸಹಾ ಕೈಗೊಳ್ಳಲಾಗಿದೆ.

ಬೆಂಗಳೂರು ನಗರಕ್ಕೆ ವೃತ್ತಾಕಾರದ ರೈಲು, ಫ್ಲೈ ಓವರ್ ರಸ್ತೆ ಹಾಗೂ ಏರ್ ಬಸ್ ಆಳವಡಿಸುವ ಯೋಜನೆಗಳ ಬಗ್ಗೆ.

೨೦೩೧ ಶ್ರೀ ಜಿ. ನಾರಾಯಣ ಕುಮಾರ್ (ಬಿನ್ನಿಪೇಟೆ) —ಮಾನ್ಯ ಕಾನೂನು ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಮತ್ತು ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಅಭಿವೃದ್ಧಿ ದಿಸೆಯಲ್ಲಿ ಮುಖ್ಯರಸ್ತೆಗಳಿಗೆ ಫ್ಲೈ ಓವರ್ ಸೇತುವೆಗಳ ನಿರ್ಮಾಣಕ್ಕೆ ಯೋಜನೆಗಳಿವೆಯೇ? ಹಾಗಿದ್ದರೆ ಅವುಗಳ ರೂಪರೇಷೆ ಏನು?

ಆ) ಬೆಂಗಳೂರಿನ ನಗರದಲ್ಲಿ ಏರ್‌ಬಸ್‌ಗಳನ್ನು ಆಳವಡಿಸುವ ಯೋಜನೆಗಳು ಸರ್ಕಾರದಲ್ಲಿದೆಯೇ, ಹಾಗಿದ್ದರೆ ಅವುಗಳ ರೂಪರೇಷೆ ಏನು?

ಇ) ಬೆಂಗಳೂರು ನಗರಕ್ಕೆ ವೃತ್ತಾಕಾರದ ರೈಲು ಹಾಕಿಸುವ ಯೋಜನೆ ಇದೆಯೇ, ಹಾಗಿದ್ದರೆ ಅವುಗಳ ರೂಪರೇಷೆ ಏನು ಅದು ಯಾವಾಗ ಜಾರಿಗೆ ಬರ ಬಹುದು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಸಾಯ ನಗರಾಭಿವೃದಿ ಮತ್ತು ಆಹಾರ ಸಚಿವರು).—

ಅ) ಹೌದು ಬೆಂಗಳೂರು ಮಹಾನಗರಪಾಲಿಕೆಯು ಮುಖ್ಯ ರಸ್ತೆಗಳಿಗೆ ಫ್ಲೈ ಓವರ್ ಹಾಕಲು ಕೆಳಕಾಣಿಸಿದ ಯೋಜನೆಗಳಿವೆ.

೧) ಹಡ್ಸನ್ ವೃತ್ತದಿಂದ ಸಿರ್ಸಿ ವೃತ್ತವನ್ನು ಸೇರಿಸಲು ಫ್ಲೈ ಓವರ್ ಹಾಕುವುದು,